# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **35** |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 11-08-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| ಪ್ರಶ್ನೆ | | ಉತ್ತರ |
|---|---|---|
| ಅ) | ಮಂಗಳೂರು ತಾಲ್ಲೂಕಿನ ಮಹಾನಗರಪಾಲಿಕೆ ವ್ಯಾಪ್ತಿಯ ಕುಡುಪು ಪ್ರದೇಶದಲ್ಲಿ 110 ಕೆ.ವಿ. ಸಾಮರ್ಥ್ಯತದ ಸಬ್ ಸ್ಟೇಷನ್‌ನ್ನು 2018 ರಲ್ಲಿ ನಿರ್ಮಿಸಬೇಕೆಂದು ತೀರ್ಮಾನಿಸಲಾಗಿದ್ದು, ಇನ್ನೂ ಕಾರ್ಯಗತಗೊಳಿಸದಿರಲು ಕಾರಣಗಳೇನು ; | ಮಂಗಳೂರು ತಾಲೂಕಿನ ಕುಡುಪುನಲ್ಲಿ 2x20ಎಂ.ವಿ.ಎ., 110/11ಕೆವಿ ವಿದ್ಯುತ್ ಉಪಕೇಂದ್ರದ ಸ್ಥಾಪನೆ ಕಾಮಗಾರಿಗೆ ದಿನಾಂಕ 29.08.2022 ರಂದು ನಡೆದ 89ನೇ ಕವಿಪ್ರನಿನಿಯ ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ.<br><br>ಸದರಿ ವಿದ್ಯುತ್ ಉಪಕೇಂದ್ರದ ಸ್ಥಾಪನೆಗೆ ಕುಡುಪು ಗ್ರಾಮದಲ್ಲಿ ಸರ್ಕಾರಿ ಜಮೀನು ಲಭ್ಯವಿಲ್ಲದ್ದರಿಂದ, ಉಪಕೇಂದ್ರದ ನಿರ್ಮಾಣಕ್ಕೆ ಸೂಕ್ತ ಖಾಸಗಿ ಸ್ಥಳವನ್ನು ಗುರುತಿಸಿ ಹಾಗು ಅದರ ತಾಂತ್ರಿಕ ಸೂಕ್ತತೆ ಯನ್ನು ಪರಿಶೀಲಿಸಿ ಸ್ಥಳ ಅಂತಿಮಗೊಳಿಸಲಾಗಿರುತ್ತದೆ.<br><br>ಕುಡುಪು ಗ್ರಾಮದ ಸರ್ವೆ ನಂ. 16/17, 64/6,63/3,133/3A2&133/5 ರಲ್ಲಿ 2.58 ಎಕರೆ ಖಾಸಗಿ ಜಮೀನು ಖರೀದಿಗೆ ಜಿಲ್ಲಾಧಿಕಾರಿಯವರು ದಿನಾಂಕ 15.02.2023 ರಂದು ಭೂಮಿಯ ಸೆಂಟ್ 1 ಕ್ಕೆ ರೂ.3,79,705 ರಂತೆ ದರ ನಿಗದಿಪಡಿಸಿರುತ್ತಾರೆ.<br><br>ಈ ದರಕ್ಕಿಂತ ಕಡಿಮೆ ದರದಲ್ಲಿ ಸುತ್ತಮುತ್ತಲಿನ ಪ್ರದೇಶದಲ್ಲಿನ ಸೂಕ್ತ ಖಾಸಗಿ ಜಮೀನಿನ ಲಭ್ಯತೆ ಬಗ್ಗೆ ಪರಿಶೀಲಿಸಲು ದಿನಾಂಕ 11.08.2023 ರ ಉದಯವಾಣಿ ಮತ್ತು ಹೊಸದಿಗಂತ ಕನ್ನಡ ದಿನಪತ್ರಿಕೆಯಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿರುತ್ತದೆ.<br><br>ಆದರೆ, ಜಿಲ್ಲಾಧಿಕಾರಿಯವರು ನಿಗಧಿಪಡಿಸಿರುವ ದರಕ್ಕೆ ಯಾವುದೇ ಖಾಸಗಿ ಜಮೀನು ಲಭ್ಯವಿಲ್ಲವಾದ್ದರಿಂದ ಪ್ರಸ್ತಾವನೆಯಲ್ಲಿರುವ ಕುಡುಪು ಗ್ರಾಮದ ಖಾಸಗಿ ಜಮೀನಿನಲ್ಲಿಯೇ 110/11ಕೆವಿ ವಿದ್ಯುತ್ ಉಪಕೇಂದ್ರ ಸ್ಥಾಪಿಸುವ ಪ್ರಸ್ತಾವನೆ ನಿಗಮ ಕಾರ್ಯಾಲಯಕ್ಕೆ ದಿನಾಂಕ 05-10-2023 ರಂದು ಸಲ್ಲಿಸಲಾಗಿರುತ್ತದೆ. |

| | | |
|---|---|---|
| | | ತದನಂತರ ನಿರ್ದೇಶಕರು (ತಾಂತ್ರಿಕ), ಬೆಂಗಳೂರು ರವರು ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಹಾಸನ ಹಾಗೂ ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ ವೃತ್ತ, ಮಂಗಳೂರು ಇವರೊಂದಿಗೆ ದಿನಾಂಕ 09.02.2024 ರಂದು ಪ್ರಸ್ತಾವಿತ ಜಮೀನಿಗೆ ಬೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದು, ನಿಗಮ ಕಾರ್ಯಾಲಯದಿಂದ ಕೆಲವೊಂದು (ಪರ್ಯಾಯ ಜಮೀನು ಲಭ್ಯವಿಲ್ಲದಿರುವ ಬಗ್ಗೆ, ನಿಗದಿಗೊಳಿಸಿದ ದರವನ್ನು ಕಡಿಮೆಗೊಳಿಸಲು, ವಿನ್ಯಾಸ ನಕ್ಷೆ ಮತ್ತು ಸಂಪರ್ಕ ರಸ್ತೆಯನ್ನು ನಿಗಮದ ಸ್ವಾಧಿನ ಪಡೆಯಲು ಕ್ರಮ ಇತ್ಯಾದಿ) ಮಾಹಿತಿಯೊಂದಿಗೆ ಪ್ರಸ್ತಾವನೆಯನ್ನು ಮರುಸಲ್ಲಿಸಲು ವಲಯ ಕಚೇರಿಗೆ ದಿನಾಂಕ 13.05.2024 ರಂದು ತಿಳಿಸಲಾಗಿರುತ್ತದೆ.<br><br>ನಿಗಮದ ಸೂಚನೆಯಂತೆ ವಿವರಣೆಗಳೊಂದಿಗೆ ಮುಖ್ಯ ಇಂಜಿನಿಯರ್(ವಿ) ಹಾಸನರವರಿಂದ 23.08.2024 ರಂದು ನಿಗಮ ಕಾರ್ಯಾಲಯಕ್ಕೆ ಪ್ರಸ್ತಾವನೆಯು ಸ್ವೀಕೃತಗೊಂಡಿರುತ್ತದೆ.<br><br>ದಿನಾಂಕ 26.12.2024 ರಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರು ದಾಖಲಾತಿಗಳನ್ನು ಕವಿಪ್ರನಿನಿಯ ನಿಗಮ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.<br><br>ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಹಾಸನ ರವರು ತಹಶೀಲ್ದಾರರು ನೀಡಿರುವ ವರದಿ, ಖರೀದಿ ಒಡಂಬಡಿಕೆ, ರಸ್ತೆಯ ಅಗಲ ಮತ್ತು ಮುಖ್ಯ ರಸ್ತೆಗೆ ಇರುವ ದೂರಗಳನ್ನೊಳಗೊಂಡ ನಕ್ಷೆ ಇತ್ಯಾದಿ ವಿವರಗಳ ವರದಿಯನ್ನೊಳಗೊಂಡಂತೆ, ಭೂಸ್ವಾಧೀನ ಪ್ರಸ್ತಾವನೆಯು ನಿಗಮ ಕಾರ್ಯಾಲಕ್ಕೆ ಅನುಮೋದನೆಗಾಗಿ ದಿನಾಂಕ: 14.03.2025ರಂದು ಸ್ವೀಕತಗೊಂಡಿರುತ್ತದೆ.<br><br>ನಿಗಮ ಕಾರ್ಯಾಲಯದ ನಿರ್ದೇಶನದಂತೆ, ಕುಡುಪುವಿನಲ್ಲಿ ಪ್ರಸ್ತಾವಿತ ವಿದ್ಯುತ್ ಕೇಂದ್ರ ಸ್ಥಾಪನೆಗೆ ಗುರುತಿಸಿರುವ ಸ್ಥಳವನ್ನು ದಿನಾಂಕ 20.06.2025 ರಂದು ಸ್ಥಳ ಪರಿಶೀಲನೆ ಮಾಡಲಾಗಿದ್ದು, ಪರಿಶೀಲನಾ ವರದಿಯನ್ವಯ ಕುಡುಪುವಿನಲ್ಲಿ 2x10 ಎಂ.ವಿ.ಎ. 110/11 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪಿಸುವ ಸಲುವಾಗಿ ಗುರುತಿಸಲಾದ ಜಾಗದಲ್ಲಿ ಉಪಕೇಂದ್ರ ಸ್ಥಾಪಿಸಬಹುದೆಂದು ಅಭಿಪ್ರಾಯಿಸಲಾಗಿದೆ.<br><br>ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆರವರು ಮಂಗಳೂರು ತಾಲೂಕಿನ ಕುಡುಪುವಿನಲ್ಲಿ 110ಕೆವಿ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಗುರುತಿಸಿಲಾದ ಜಮೀನಿಗೆ ಸೆಂಟ್ಸ್ ಒಂದಕ್ಕೆ ರೂ.3,79,705/- ರಂತೆ 2.58 ಎಕರೆಗೆ ರೂ.9,79,63,890.00 ಗಳನ್ನು ದಿನಾಂಕ:15-02-2023ರ ಪತ್ರದಲ್ಲಿ ದರ ನಿಗಧಿಪಡಿಸಿರುತ್ತಾರೆ. |

<table>
<tr><td></td><td></td><td>ಪ್ರಸ್ತುತ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಕುಡುಪುವಿನಲ್ಲಿ 2x10 ಎಂ.ವಿ.ಎ. 110/11 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪಿಸುವ ಸಲುವಾಗಿ ಸದರಿ ಗ್ರಾಮದ ಸರ್ವೆ ನಂ. 16/17, 64/6,63/3,133/1A2(ಪಿ)2 ಮತ್ತು 133/5(ಪಿ) ಗಳಲ್ಲಿನ ಒಟ್ಟು ವಿಸ್ತೀರ್ಣ 2.58 ಎಕರೆ ಖಾಸಗಿ ಭೂ ಪರಿವರ್ತಿತ ಜಮೀನಿಗೆ ಜಿಲ್ಲಾಧಿಕಾರಿ, ದಕ್ಷಿಣಕನ್ನಡ ಜಿಲ್ಲೆರವರು ದಿನಾಂಕ 15.02.2023 ರಂದು ನಿಗಧಿಪಡಿಸಿದ ದರದನ್ವಯ ಸದರಿ ಜಮೀನನ್ನು ನಿಗಮದ ಹೆಸರಿಗೆ ನೋಂದಾಯಿಸಲು ತಗಲುವ ಶಾಸನಬದ್ಧ ವೆಚ್ಚ ಭರಿಸಲು ಅನುಮೋದನೆ ಸಂಬಂಧ ಪ್ರಸ್ತಾವನೆಯು ನಿಗಮ ಕಾರ್ಯಾಲಯದಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ.<br><br>ಸದರಿ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ದಿನಾಂಕ:03.07.2025 ರಂದು ನಡೆದ ಕವಿಪ್ರನಿನಿಯ (ಸೆಸ್ಕ್ ಮತ್ತು ಮೆಸ್ಕಾಂ) 2 ನೇ ತಾಂತ್ರಿಕ ಸಮನ್ವಯ ಸಭೆಯಲ್ಲಿ ಪ್ರಸ್ತಾವಿತ ಕಾಮಗಾರಿಯನ್ನು ಮರು ಅಂಗೀಕರಿಸಿ ಅನುಮೋದನೆ ನೀಡಲಾಗಿದೆ.</td></tr>
<tr><td>ಆ)</td><td>ಇಲ್ಲಿ ಸಬ್ ಸ್ಟೇಷನ್ ಇಲ್ಲದೇ ಅಡ್ಯಾರು, ಪಣಂಬೂರು, ಉಳ್ಳಬೆಟ್ಟು, ಗುರುಪುರ, ಕುಡುಪು ತಿರುವೈಲು ಪ್ರದೇಶಗಳಲ್ಲಿ ಗುಣಮಟ್ಟದ ವಿದ್ಯುತ್ ನೀಡಲು ಸಾಧ್ಯವಾಗದೇ ನಿಯತಕಾಲಿಕವಾಗಿ ವಿದ್ಯುತ್ ಸಂಪರ್ಕ ಕಡಿತ ಉಂಟಾಗಿದ್ದು, ಸ್ಥಳೀಯ ಜನರು ಈ ಬಗ್ಗೆ ಬೇಡಿಕೆ ನೀಡಿದ್ದರೂ ಕ್ರಮವಹಿಸದೇ ಇರಲು ಕಾರಣವೇನು;</td><td rowspan="2">ಅಡ್ಯಾರು, ಪಣಂಬೂರು, ಉಳಾಯಿಬೆಟ್ಟು, ಗುರುಪುರ, ಕುಡುಪು, ತಿರುವೈಲು ಪ್ರದೇಶಗಳಲ್ಲಿ ಪ್ರಸ್ತುತ, 23 ರಿಂದ 24 ಗಂಟೆಗಳ ಕಾಲ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲಾಗುತ್ತಿದ್ದು, ಸದರಿ ಪ್ರದೇಶಗಳಿಗೆ ಕವಿಪ್ರನಿನಿ ವತಿಯಿಂದ ವಿದ್ಯುತ್ ಸರಬರಾಜು ಮಾಡಲು ಯಾವುದೇ ನಿರ್ಬಂಧಗಳಿರುವುದಿಲ್ಲ.<br><br>ಮುಂದುವರೆದು, ಕವಿಪ್ರನಿನಿ ವತಿಯಿಂದ ವಿದ್ಯುತ್ ಬೇಡಿಕೆ ಮತ್ತು ಗುಣಮಟ್ಟದ ವಿದ್ಯುತ್ ಸರಬರಾಜಿಗಾಗಿ ಕೆಳಕಂಡ ಹೊಸ ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ:<br>1. ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲೂಕಿನ ಅಡ್ಯಾರ್‌ನಲ್ಲಿ 2x20 ಎಂವಿಎ, 110/11 ಕೆವಿ ವಿದ್ಯುತ್ ಉಪಕೇಂದ್ರ ಸ್ಥಾಪನೆ ಕಾಮಗಾರಿಗೆ ಕವಿಪ್ರನಿನಿಯ 79ನೇ ತಾಂತ್ರಿಕ ಸಮನ್ವಯ ಸಮಿತ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ. ಅರ್ಕುಳ ಗ್ರಾಮದ ಸ.ನಂ. 25/3 ರಲ್ಲಿ 3.0 ಎಕರೆ ಖಾಸಗಿ ಜಮೀನು ಗುರುತಿಸಲಾಗಿದ್ದು, ಜಿಲ್ಲಾಧಿಕಾರಿರವರಿಂದ ದರ ನಿಗದಿಯಾಗಬೇಕಿದೆ.<br>2. ಮಂಗಳೂರು ತಾಲೂಕಿನ ಎನ್.ಎಮ್.ಪಿ.ಎ ಯಲ್ಲಿ 110/33/11 ಕೆವಿ ವಿದ್ಯುತ್ ಉಪಕೇಂದ್ರ ನಿರ್ಮಾಣ ಕಾಮಗಾರಿಗೆ ನವ ಮಂಗಳೂರು ಬಂದರು ಪ್ರಾಧಿಕಾರಕ್ಕೆ ಸೇರಿದ ಸುಮಾರು 4.0 ಎಕರೆ ಜಮೀನನ್ನು 30 ವರ್ಷಗಳಿಗೆ ಲೀಸ್ ಪಡೆಯಲು ಪ್ರಸ್ತಾವನೆಯು ನಿಗಮ ಕಚೇರಿಯಲ್ಲಿ ದಿನಾಂಕ:19.07.2025 ಸಭೆ ನಡೆಸಲಾಗಿ ಭೂಮಿ ಗುತ್ತಿಗೆ ಒಪ್ಪಂದ ಪ್ರಕ್ರಿಯೆಯಲ್ಲಿದೆ.<br>3. ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲೂಕಿನ ಕುಡುಪುನಲ್ಲಿ 2x20ಎಂ.ವಿ.ಎ., 110/11ಕೆವಿ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ದಿನಾಂಕ:03.07.2025 ರಂದು ನಡೆದ ಕವಿಪ್ರನಿನಿಯ (ಸೆಸ್ಕ್ ಮತ್ತು ಮೆಸ್ಕಾಂ) 2 ನೇ ತಾಂತ್ರಿಕ ಸಮನ್ವಯ ಸಭೆಯಲ್ಲಿ ಪ್ರಸ್ತಾವಿತ ಕಾಮಗಾರಿಯನ್ನು ಮರು ಅಂಗೀಕರಿಸಿ ಅನುಮೋದನೆ ನೀಡಲಾಗಿದೆ. 2.58 ಎಕರೆ ಖಾಸಗಿ ಭೂ ಪರಿವರ್ತಿತ ಜಮೀನನ್ನು ನಿಗಮದ ಹೆಸರಿಗೆ ನೋಂದಾಯಿಸಲು ತಗಲುವ ಶಾಸನಬದ್ಧ ವೆಚ್ಚ ಭರಿಸಲು ಅನುಮೋದನೆ ಸಂಬಂಧ ಪ್ರಸ್ತಾವನೆಯು ನಿಗಮ ಕಾರ್ಯಾಲಯದಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ.<br>ಮೆಸ್ಕಾಂ ವತಿಯಿಂದ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲು ಮೆಸ್ಕಾಂನಿಂದ ಕಾಲಕಾಲಕ್ಕೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. (ವ್ಯವಸ್ಥೆ ಸುಧಾರಣೆಯಡಿ ಹೆಚ್ಚುವರಿ ಪರಿವರ್ತಕಗಳ ಅಳವಡಿಕೆ, ಲಿಂಕ್ ಲೈನ ಗಳ ನಿರ್ಮಾಣ, ಹೆಚ್.ಟಿ.ಎಲ್.ಟಿ ಮಾರ್ಗಗಳ ವಾಹಕ ಬದಲಾವಣೆ ಮೊದಲಾದ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.)<br>ಮೆಸ್ಕಾಂ ವ್ಯಾಪ್ತಿಯಲ್ಲಿ, ರೈತರಿಗೆ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.</td></tr>
<tr><td>ಇ)</td><td>ಗುಣಮಟ್ಟದ ವಿದ್ಯುತ್ ನೀಡುವುದರಿಂದ ರೈತರ ಕೃಷಿ ಬೆಳೆಗೆ ಸಹಾಯಕವಾಗುವುದರಿಂದ ಈ ಬಗ್ಗೆ ಸರ್ಕಾರ ಗಮನ ವಹಿಸುವದೇ;</td></tr>
</table>

| | | |
|---|---|---|
| ಈ) | ಸಾರಿಗೆ ಇಲಾಖೆಯು ಮಂಗಳೂರಿನಲ್ಲಿ ವಿದ್ಯುತ್ ಚಾಲಿತ ವಾಹನಗಳಿಗೆ ಚಾರ್ಜಿಂಗ್ ಸ್ಟೇಷನ್ ನಿರ್ಮಿಸಿ ವಿದ್ಯುತ್ ಸರಬರಾಜು ಮಾಡಲು ಬೇಡಿಕೆಯನ್ನು ಸಲ್ಲಿಸಿದ್ದರೂ ಇನ್ನೂ ಬೇಡಿಕೆ ಪೂರೈಸದಿರಲು ಕಾರಣವೇನು; ಈ ಬಗ್ಗೆ ಕೈಗೊಂಡ ಕ್ರಮವೇನು; (ವಿವರ ನೀಡುವುದು) | ಕವಿಪ್ರನಿನಿಗೆ ಸಾರಿಗೆ ಇಲಾಖೆಯಿಂದ ದಿನಾಂಕ:06.05.2025 ರಂದು ಅರ್ಜಿಯು ಸ್ವೀಕೃತಗೊಂಡಿದ್ದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಕುಂಟಿಕಾನ ಮಂಗಳೂರು ಡಿಪೋ-3 ಯಲ್ಲಿ ಇವಿ ಚಾರ್ಜಿಂಗ್ ಗಾಗಿ 11ಕೆವಿ ನೆಲೆಯಲ್ಲಿ 4 ಮೆ.ವ್ಯಾ ವಿದ್ಯುತ್ ಸರಬರಾಜಿಗೆ ದಿನಾಂಕ 27-06-2025 ರಂದು ಕವಿಪ್ರನಿನಿಯಿಂದ ಮಂಜೂರಾತಿಯನ್ನು ನೀಡಲಾಗಿದೆ.<br><br>ಅದರಂತೆ, ಸದರಿ ಪ್ರಸ್ತಾವನೆಗೆ ಮೆಸ್ಕಾಂ ವತಿಯಿಂದ ದಿ:02.08.2025 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಕಾಮಗಾರಿಯನ್ನು ಸಾರಿಗೆ ಇಲಾಖೆಯಿಂದ ಸ್ವಯಂ ಕಾರ್ಯನಿರ್ವಹಣೆ ಮಾದರಿಯಲ್ಲಿ ಕೈಗೊಳ್ಳಬೇಕಾಗಿರುತ್ತದೆ. |
| ಉ) | ಸ್ಮಾರ್ಟ್ ಸಿಟಿ-24 ಗಂಟೆ ವಿದ್ಯುತ್ ನೀಡಲು ಸಾಧ್ಯವಾಗದಿರುವ ಬಗ್ಗೆ ಇಲಾಖೆಯ ಗಮನದಲ್ಲಿದೆಯೇ; ಈ ಬಗ್ಗೆ ಕೆ.ಪಿ.ಟಿ.ಸಿ.ಎಲ್. ಇನ್ನೂ ಕೈಗೊಳ್ಳದಿರಲು ಕಾರಣಗಳೇನು; (ವಿವರ ನೀಡುವುದು); ಈ ಬಗ್ಗೆ ಕೆ.ಡಿ.ಪಿ. ಸಭೆಯಲ್ಲಿ ಕೂಡಲೇ ಸಬ್ ಸ್ಟೇಷನ್ ನ್ನು ಅಳವಡಿಸುವುದಾಗಿ ಆಶ್ವಾಸನೆ ನೀಡಿದರೂ ಇನ್ನೂ ಈ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು? | ಸ್ಮಾರ್ಟ್ ಸಿಟಿ ಯೋಜನೆಯಡಿ ಮಂಗಳೂರು ನಗರಕ್ಕೆ 24ಗಂಟೆ ವಿದ್ಯುತ್ ಸರಬರಾಜು ನೀಡಲು ಕವಿಪ್ರನಿನಿ ವತಿಯಿಂದ ಯಾವುದೇ ನಿರ್ಬಂಧಗಳಿಲ್ಲದೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.<br><br>ಕವಿಪ್ರನಿನಿ ವತಿಯಿಂದ ವಿದ್ಯುತ್ ಬೇಡಿಕೆ ಮತ್ತು ಗುಣಮಟ್ಟದ ವಿದ್ಯುತ್ ಸರಬರಾಜಿಗಾಗಿ ಉದ್ದೇಶಿಸಿದ ಹೊಸ ವಿದ್ಯುತ್ ಉಪಕೇಂದ್ರಗಳ ವಿವರಗಳನ್ನು ಕ್ರಮ ಸಂಖ್ಯೆ (ಆ) ಮತ್ತು (ಇ) ಉತ್ತರದಲ್ಲಿ ಒದಗಿಸಲಾಗಿದೆ. |

ಸಂಖ್ಯೆ: ಎನರ್ಜಿ 149 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು